## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.769-2013** **ಪಿ . ಡಬ್ಲು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಸಾಕಮ್ಮ<br>ಪಿ.ಮರಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 26-10-2024.** |

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಶ್ರೀ ಎನ್.ಎಸ್ ವಕೀಲರಿಂದ:**

4. ಗುರಸಿದ್ಧಮ್ಮ ಉ ಸಿದ್ಧಮ್ಮ ರವರ ಪತಿಯವರು ಕ್ರಯಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತಿನ ಪಹಣಿ ಪತ್ರಿಕೆಯೂ 1 ನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತಿರುವ ವಿಚಾರ ನನಗೆ ಸುಮಾರು ವರ್ಷಗಳಿಂದಲೂ ಗೊತ್ತು. ನಾನು ಸ್ವತ್ತನ್ನು ಕ್ರಯಕ್ಕೆ ಪಡೆದ 10 ವರ್ಷಗಳ ನಂತರ ಖಾತೆ ಮಾಡಿಸಲು ಅರ್ಜಿ ನೀಡಿದಾಗ ದಾವಾ ಷೆಡ್ಯೂಲ್ ಸ್ವತ್ತಿನ ಪಹಣಿಯೂ 1 ನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತಿರುವುದು ನನಗೆ ತಿಳಿದು ಬಂದಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ಪಹಣಿ ಪತ್ರಿಕೆಯೂ 1 ನೇ ಪ್ರತಿವಾದಿ ಹೆಸರಿನಲ್ಲಿ ಬರುತ್ತಿದೆ ಎಂಬ ವಿಚಾರ ತಿಳಿದು ಬಂದ ನಂತರ ನಾನು 1 ನೇ ಪ್ರತಿವಾದಿಯವರ ವಿರುದ್ಧ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ಪಹಣಿ ಪತ್ರಿಕೆಯಲ್ಲಿ 1 ನೇ ಪ್ರತಿವಾದಿಯವರ ಹೆಸರನ್ನು ತೆಗೆದು ಹಾಕುವಂತೆ ನಾನು ತಹಶೀಲ್ದಾರ್ ರವರಿಗೆ ಯಾವುದೇ ಅರ್ಜಿಯನ್ನು

ನೀಡಿರುವುದಿಲ್ಲ. ನಾನು ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಈ ದಾವಾ ಸಲ್ಲಿಸುವವರೆವಿಗೆ ಎಂದೂ ಯಾವಾಗಲೂ ನನ್ನ ಮಾರಾಟಗಾರರಿಗೆ ನೋಟಿಸ್ ನೀಡಿರುವುದಿಲ್ಲ. ಮೊದಲು ನಂಜುಂಡಪ್ಪನವರ ಪತ್ನಿಯವರು ಮರಣ ಹೊಂದಿದ್ದು, ಅನಂತರ ಈಗ್ಗೆ ಸುಮಾರು ವರ್ಷಗಳ ಹಿಂದೆ ನಂಜುಂಡಪ್ಪನವರು ಮರಣ ಹೊಂದಿರುತ್ತಾರೆ. ಸುಮಾರು 20 ವರ್ಷಗಳಿಂದ ನಂಜುಂಡಪ್ಪನವರು ಸಾಯುವವರೆವಿಗೆ ಕ್ರಯ ಪತ್ರವನ್ನು ಸರಿಪಡಿಸಿಕೊಡುವಂತೆ ಕೇಳಿರುತ್ತೇನೆ. ಸಬೂಬು ಹೇಳುತ್ತಿದ್ದ ಸಂಬಂಧ ನಂಜುಂಡಪ್ಪ ಮತ್ತು ಅವರ ಪತ್ನಿಯ ವಿರುದ್ಧ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ. ನನ್ನ ಕ್ರಯ ಪತ್ರದಲ್ಲಿ ನಮೂದಿಸಿರುವ ಸ್ವತ್ತೇ ನನಗೆ ಕ್ರಯವಾದ ಸ್ವತ್ತಾಗಿರುವುದರಿಂದ ನಾನು ಅವರನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ.36 ಮತ್ತು 38 ರ ಚೆಕ್ಕುಬಂದಿಗಳು ಬೇರೆ ಬೇರೆ ಆಗಿರುವುದರಿಂದ ನಾನು ನಂಜುಂಡಪ್ಪನವರನ್ನು ಸಂಪರ್ಕಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಖಂಡಿಕೆ–6 ರಲ್ಲಿ ಪ್ರತಿವಾದಿಗಳನ್ನು ಹಲವಾರು ಭಾರಿ ಮನವಿ ಮಾಡಿಕೊಂಡರು ಸಹ ಅವರು ನನ್ನ ಮನವಿಗೆ ಸ್ಪಂಧಿಸಿರುವುದಿಲ್ಲ ಎಂದು ಹೇಳಿದ್ದು, ಸದರಿ ಮನವಿ ಮಾಡಿಕೊಂಡು ದಿನಾಂಕಗಳನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ.

5.ಸರ್ವೇ ನಂ.38 ರಲ್ಲಿ 4 ಎಕರೆ 36 ಗುಂಟೆ ಜಮೀನು ಇರುತ್ತದೆ. ಸದರಿ ಪೂರ್ಣ ವಿಸ್ತೀರ್ಣದ ಜಮೀನನ್ನು ಯಾರು-ಯಾರು ಕ್ರಯಕ್ಕೆ ಪಡೆದರು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.38 ರ ಒಟ್ಟು ವಿಸ್ತೀರ್ಣ 4 ಎಕರೆ 36 ಗುಂಟೆ ಜಮೀನನ್ನು ಚಾಮಪ್ಪನವರು ಹೆಂಡತಿ ಪುಟ್ಟಲಿಂಗಮ್ಮ ಮತ್ತು ಮಾದಪ್ಪನವರ ಹೆಂಡತಿ ಶಿವಮ್ಮ ರವರು ದಿ.19-07-1954 ರ ನೋಂದಣಿ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಸದರಿಯವರುಗಳ ಜೀವಿತಾವಧಿಯಲ್ಲಿ ಅವರ ಹೆಸರಿಗೆ ಖಾತೆ ಆಗದೇ ಇದ್ದ ಕಾರಣ, ಸದರಿಯವರುಗಳ ಮರಣಾ ನಂತರ ಅವರ ವಾರಸುದಾರರು 2013 ರಲ್ಲಿ ಸರ್ವೇ ನಂ.38 ರ ಖಾತೆಯನ್ನು ತಮ್ಮಗಳ ಹೆಸರಿಗೆ ಬದಲಾವಣೆ ಮಾಡಿಕೊಡುವಂತೆ ತಹಶೀಲ್ದಾರ್ ರವರು ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ತಹಶೀಲ್ದಾರ್ ರವರು ಸಿವಿಲ್ ನ್ಯಾಯಾಲಯದಿಂದ ಆದೇಶ ತರುವಂತೆ ತಿಳಿಸಿದ್ದರಿಂದ ಪುಟ್ಟಲಿಂಗಮ್ಮ ಮತ್ತು ಶಿವಮ್ಮ ರವರ ವಾರಸುದಾರರು ಅಸಲು ದಾವಾ ಸಂ.776/2013 ರಂತೆ ಖಾತೆದಾರರಾದ ಮಾದಶೆಟ್ಟಿ ಮತ್ತು ಹುಚ್ಚಶೆಟ್ಟಿ ರವರ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಸದರಿ ದಾವೆಯಲ್ಲಿ ಪುಟ್ಟಲಿಂಗಮ್ಮ ಮತ್ತು ಶಿವಮ್ಮ ಕಾನೂನುಬದ್ಧ ವಾರಸುದಾರರೇ ಸರ್ವೇ ನಂ.38 ರ ವಿಸ್ತೀರ್ಣ 4 ಎಕರೆ 36 ಗುಂಟೆಯ ಸಂಪೂರ್ಣ ಮಾಲೀಕರು ಎಂದು ಆದೇಶ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟಲಿಂಗಮ್ಮ ಮತ್ತು ಶಿವಮ್ಮ

ರವರ ಜೀವಿತಾವಧಿಯಲ್ಲಿ ಸರ್ವೆ ನಂ.38 ವಿಸ್ತೀರ್ಣ 4 ಎಕರೆ 36 ಗುಂಟೆ ಜಮೀನಿನ ಸ್ವಾಧೀನದಲ್ಲಿ ಇದ್ದು, ಅವರ ಮರಣಾ ನಂತರ ಅವರ ವಾರಸುದಾರರುಗಳು ಸದರಿ ಜಮೀನಿನ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನೇ 50 ವರ್ಷಗಳಿಂದ ಸ್ವಾಧೀನಾನು ಭವದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ತಂದೆ ಮತ್ತು ಅಜ್ಜಿಯವರು ಸರ್ವೆ ನಂ.38 ವಿಸ್ತೀರ್ಣ 4 ಎಕರೆ 36 ಗುಂಟೆ ಸ್ವತ್ತಿನ ಸ್ವಾಧೀನದಲ್ಲಿ ಇರುವ ವಿಚಾರ ಸುಮಾರು 20 ವರ್ಷಗಳ ಹಿಂದೆಯೇ ನನಗೆ ಗೊತ್ತಿದ್ದರೂ ಸಹ ನಾನು ಅವರ ವಿರುದ್ಧ ಯಾವುದೇ ಕ್ರಮವವನ್ನು ಜರುಸಿಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಕ್ರಯವಾಗಿರುವ ಸ್ವತ್ತು ಸರ್ವೆ ನಂ.36 ಎಂದು ತಿಳಿದಿದ್ದರಿಂದ, ಸರ್ವೆ ನಂ.38 ರ ಲಾಗಾಯ್ತು 2013 ರವರೆಗೆ ನಾನು ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರಗಳ ಆಧಾರದ ಮೇರೆಗೆ ನಾನು ಯಾವುದೇ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸಹ ಹಾಗೂ ನನ್ನ ಹೆಸರಿಗೆ ಯಾವುದೇ ಖಾತೆ ಆಗದೇ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.38 ರಲ್ಲಿ ಪುಟ್ಟಲಿಂಗಮ್ಮ, ಶಿವಮ್ಮ ಮತ್ತು ಅವರ ವಾರಸುದಾರರು ಸ್ವಾಧೀನದಲ್ಲಿ ಇರುವ ವಿಚಾರ ಗೊತ್ತಿದರೂ ಹಾಗೂ ಅಸಲು ದಾವಾ ಸಂ.776/2013

ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವ ವಿಚಾರ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**